**All India Radio: Bangalore**
**National Bulletin In Kannada**
**01.08.2026 1.10 p.m.**

ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

1. ಸಾರ್ವಜನಿಕ ಪರೀಕ್ಷೆಗಳ ತಿದ್ದುಪಡಿ ಮಸೂದೆ-೨೦೨೬ಕ್ಕೆ ರಾಷ್ಟ್ರಪತಿ ಅನುಮೋದನೆ
2. ಆಂಧ್ರಪ್ರದೇಶದ ವಿಜಯನಗರಂ ಜಿಲ್ಲೆಯಲ್ಲಿ ಪ್ರಧಾನಿ ಅವರಿಂದ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಉದ್ಘಾಟನೆ
3. ೧೯ ಕೆಜಿ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್ ದರ ೨೦೦ ರೂಪಾಯಿಗಳಷ್ಟು ಇಳಿಕೆ: ಇಂದಿನಿಂದ ಹೊಸ ದರ ಜಾರಿಜುಲೈನಲ್ಲಿ ಜಿಎಸ್‌ಟಿ ಸಂಗ್ರಹದಲ್ಲಿ ಗಮನಾರ್ಹ ಏರಿಕೆ; ೨ ಲಕ್ಷದ ೧೧ ಸಾವಿರದ ೨೦೫ ಕೋಟಿ ರೂಪಾಯಿಗಳ ಏರಿಕೆಯೊಂದಿಗೆ ಶೇಕಡ ೧೫ರಷ್ಟು ಹೆಚ್ಚಳ
4. ಗ್ಲಾಸ್ಗೋ ಕಾಮನ್ವೆಲ್ತ್ ಕ್ರೀಡಾಕೂಟ ೨೦೨೬ರಲ್ಲಿ ಪದಕ ಗಳಿಸಿರುವ ಭಾರತದ ಕ್ರೀಡಾಪಟುಗಳಿಗೆ ರಾಷ್ಟ್ರಪತಿ, ಉಪರಾಷ್ಟ್ರಪತಿ ಹಾಗೂ ಪ್ರಧಾನಿ ಅಭಿನಂದನೆ

<><><><>

ರಾಷ್ಟ್ರಪತಿ ದ್ರೌಪದಿ ಮುರ್ಮು ಸಾರ್ವಜನಿಕ ಪರೀಕ್ಷೆಗಳ ತಿದ್ದುಪಡಿ ಮಸೂದೆ-೨೦೨೬ಕ್ಕೆ ಅನುಮೋದನೆ ನೀಡಿದ್ದಾರೆ. ಈ ಮಸೂದೆಯನ್ನು ಗುರುವಾರ ಸಂಸತ್ತು ಅಂಗೀಕರಿಸಿತ್ತು. ಕಠಿಣ ಶಿಕ್ಷೆಗಳನ್ನು ಪರಿಚಯಿಸುವ ಮತ್ತು ತ್ವರಿತ ನ್ಯಾಯಾಲಯಗಳನ್ನು ಸ್ಥಾಪಿಸುವ ಮೂಲಕ ಸಾರ್ವಜನಿಕ ಪರೀಕ್ಷೆಗಳಲ್ಲಿ ಅನ್ಯಾಯದ ಅಭ್ಯಾಸಗಳನ್ನು ತಡೆಯುವುದು ಈ ಕಾಯ್ದೆಯ ಗುರಿಯಾಗಿದೆ. ವಿದ್ಯಾರ್ಥಿಗಳ ಭವಿಷ್ಯವನ್ನು ರಕ್ಷಿಸುವಾಗ ದೃಢವಾದ ಕಾನೂನು ಚೌಕಟ್ಟನ್ನು ರಚಿಸುವ ಮೂಲಕ ಪರೀಕ್ಷಾ ವ್ಯವಸ್ಥೆಯಲ್ಲಿ ಪಾರದರ್ಶಕತೆ, ನ್ಯಾಯಸಮ್ಮತತೆ ಮತ್ತು ಸಮಗ್ರತೆಯನ್ನು ಬಲಪಡಿಸಲು ಕಾಯ್ದೆ ಪ್ರಯತ್ನಿಸುತ್ತದೆ. ಹತ್ತು ವರ್ಷಗಳವರೆಗೆ ಜೈಲು ಶಿಕ್ಷೆ, ಹತ್ತು ಕೋಟಿ ರೂಪಾಯಿಗಳವರೆಗೆ ದಂಡ ಮತ್ತು ಶಿಕ್ಷೆಗೊಳಗಾದ ಅಪರಾಧಿಗಳಿಗೆ ಸೇರಿದ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳುವಂತಹ ಕಠಿಣ ದಂಡಗಳು ಸೇರಿದಂತೆ ಹಲವಾರು ಪ್ರಮುಖ ನಿಬಂಧನೆಗಳನ್ನು ಈ ಕಾಯ್ದೆ ಒಳಗೊಂಡಿದೆ.

<><><><>

ಆಂಧ್ರಪ್ರದೇಶದ ವಿಜಯನಗರಂ ಜಿಲ್ಲೆ ಭೋಗಪುರಂನಲ್ಲಿ ಇಂದು ಪ್ರಧಾನಿ ನರೇಂದ್ರ ಮೋದಿ ಅವರು, ಗ್ರೀನ್‌ಫೀಲ್ಡ್ ಅಲ್ಲೂರಿ ಸೀತಾರಾಮ ರಾಜು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಉದ್ಘಾಟಿಸಿದರು. ಇದಕ್ಕೂ ಮೊದಲು, ವಿಮಾನ ನಿಲ್ದಾಣಕ್ಕೆ ಆಗಮಿಸಿದ ಪ್ರಧಾನಿ ಅವರನ್ನು ಆಂಧ್ರಪ್ರದೇಶ ರಾಜ್ಯಪಾಲ ಎಸ್. ಅಬ್ದುಲ್ ನಜೀರ್, ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು, ಉಪಮುಖ್ಯಮಂತ್ರಿ ಪವನ್ ಕಲ್ಯಾಣ್ ಮತ್ತು ಇತರ ಗಣ್ಯರು ಬರಮಾಡಿಕೊಂಡರು. ಪ್ರಧಾನಿಯವರು ಪ್ರಯಾಣಿಕರ ಟರ್ಮಿನಲ್ ಕಟ್ಟಡವನ್ನು ಉದ್ಘಾಟಿಸಿದರು. ಬಳಿಕ ಪ್ರಧಾನಿ, ವಿಮಾನ ನಿಲ್ದಾಣದ ಅತ್ಯಾಧುನಿಕ ಪ್ರಯಾಣಿಕರ ಸೌಲಭ್ಯಗಳನ್ನು ಪರಿಶೀಲಿಸಿದರು. ಈ ವೇಳೆ ವಿಮಾನ ನಿಲ್ದಾಣದ ವಿನ್ಯಾಸ, ಸುಧಾರಿತ ತಂತ್ರಜ್ಞಾನ, ಮಾಸ್ಟರ್ ಪ್ಲಾನ್ ಮತ್ತು ವಾಯುಯಾನ ಕೇಂದ್ರವಾಗಿ ಭವಿಷ್ಯದ ವಿಸ್ತರಣೆಯ ಕುರಿತು ಅಧಿಕಾರಿಗಳು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮಾಹಿತಿ ನೀಡಿದರು. ಪ್ರಧಾನಿ ಅವರು, ಉತ್ತರ ಆಂಧ್ರದ ೧೩ ಸಾವಿರದ ೫೦೦ಕ್ಕೂ ಹೆಚ್ಚು ಬುಡಕಟ್ಟು ಮಹಿಳೆಯರು ಪ್ರದರ್ಶಿಸಿದ ಸಾಂಪ್ರದಾಯಿಕ ತಿಮ್ಸಾ ನೃತ್ಯವನ್ನು ವೀಕ್ಷಿಸಿದರು. ನಂತರ ಅವರು ಕರ್ನಾಟಕದ ಮೈಸೂರಿಗೆ ತಲುಪಲಿದ್ದು, ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಯುವ ಕೇಂದ್ರದಲ್ಲಿ ವಿವೇಕ ಸ್ಮಾರಕವನ್ನು ಉದ್ಘಾಟಿಸಲಿದ್ದಾರೆ. ಈ ಸಂದರ್ಭದಲ್ಲಿ ಅವರು, ಸಭೆಯನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ವಿವೇಕ ಸ್ಮಾರಕವು ನವೆಂಬರ್ ೧೮೯೨ರಲ್ಲಿ ಸ್ವಾಮಿ ವಿವೇಕಾನಂದರು ಭಾರತದಾದ್ಯಂತ ಪ್ರಯಾಣ ಮಾಡುವಾಗ ಮೈಸೂರಿಗೆ ನೀಡಿದ ಐತಿಹಾಸಿಕ ಭೇಟಿಯನ್ನು ಸ್ಮರಿಸುತ್ತದೆ. ಪ್ರಸಿದ್ಧ ನಿರಂಜನ ಮಠದಲ್ಲಿ ಸ್ಥಾಪಿಸಲಾದ ವಿವೇಕ ಸ್ಮಾರಕವು ೮೧ ಸಾವಿರ ಚದರ ಅಡಿಗಳಿಗೂ ಹೆಚ್ಚು ವಿಸ್ತೀರ್ಣದಲ್ಲಿ ಹರಡಿಕೊಂಡಿದೆ. ಇದು ಮುಖ್ಯವಾಗಿ ೪-ಡಿ ಅನುಭವ ಕೇಂದ್ರ, ಪ್ರದರ್ಶನ ಸಭಾಂಗಣ, ಸುಮಾರು ೭೦೦ ಜನರು ಕುಳಿತುಕೊಳ್ಳಬಹುದಾದ ಆಂಫಿಥಿಯೇಟರ್, ತರಗತಿ ಕೊಠಡಿಗಳು, ಸಮ್ಮೇಳನ ಕೊಠಡಿಗಳು, ಗ್ರಂಥಾಲಯ, ಓದುವ ಕೊಠಡಿ, ಧ್ಯಾನ ಮತ್ತು ಯೋಗ ಸಭಾಂಗಣ ಹಾಗೂ ಪುಸ್ತಕ ಮಳಿಗೆಯನ್ನು

ಹೊಂದಿದೆ. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸುತ್ತಿರುವ ವಿದ್ಯಾರ್ಥಿಗಳಿಗಾಗಿ ಮೀಸಲಾದ ಸೌಲಭ್ಯಗಳನ್ನು ಸಹ ಈ ಕೇಂದ್ರ ಒಳಗೊಂಡಿದೆ.

<><><><>

ಇಂದು ರಾಜರ್ಷಿ ಪುರುಷೋತ್ತಮ ದಾಸ್ ಟಂಡನ್ ಅವರ ಜನ್ಮ ವಾರ್ಷಿಕೋತ್ಸವದ ಹಿನ್ನೆಲೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರಿಗೆ ಗೌರವ ಸಲ್ಲಿಸಿದ್ದಾರೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಅವರು, ಭಾರತೀಯ ಸ್ವಾತಂತ್ರ್ಯ ಹೋರಾಟದ ವಿವಿಧ ಚಳವಳಿಗಳಲ್ಲಿ ರಾಜರ್ಷಿ ಪುರುಷೋತ್ತಮ ದಾಸ್ ಟಂಡನ್ ಅವರು ಪ್ರವರ್ತಕ ಪಾತ್ರವನ್ನು ವಹಿಸಿದ್ದಾರೆ ಎಂದು ಹೇಳಿದ್ದಾರೆ. ಉತ್ಸಾಹಭರಿತ ಬರಹಗಳ ಮೂಲಕ, ರಾಜರ್ಷಿ ಪುರುಷೋತ್ತಮ ದಾಸ್ ಟಂಡನ್ ಸಮಾಜವನ್ನು ಜಾಗೃತಗೊಳಿಸುವ ಮತ್ತು ರಾಷ್ಟ್ರೀಯ ಪ್ರಜ್ಞೆ ತುಂಬುವ ಪ್ರಮುಖ ಕಾರ್ಯವನ್ನು ನಿರ್ವಹಿಸಿದ್ದಾರೆ. ಹಿಂದಿ ಭಾಷೆಗೆ ರಾಜರ್ಷಿ ಪುರುಷೋತ್ತಮ ದಾಸ್ ಟಂಡನ್ ಅವರ ಕೊಡುಗೆ ಅವಿಸ್ಮರಣೀಯವಾಗಿದೆ. ರಾಷ್ಟ್ರೀಯ ಸೇವೆಗೆ ಅವರ ಸಮರ್ಪಣೆ ಮುಂದಿನ ಪೀಳಿಗೆಗೆ ಸ್ಫೂರ್ತಿಯ ಶಾಶ್ವತ ಮೂಲವಾಗಿ ಕಾರ್ಯನಿರ್ವಹಿಸುತ್ತದೆ ಎಂದು ರಾಜನಾಥ್ ಸಿಂಗ್ ತಿಳಿಸಿದ್ದಾರೆ.

<><><><>

ತೈಲ ಮಾರುಕಟ್ಟೆ ಕಂಪೆನಿಗಳು ಇಂದು ವಾಣಿಜ್ಯ ಎಲ್‌ಪಿಜಿ ಅನಿಲದ ಬೆಲೆಯನ್ನು ಸುಮಾರು ೨೦೦ ರೂಪಾಯಿಗಳಷ್ಟು ಕಡಿಮೆ ಮಾಡಿವೆ. ದೆಹಲಿಯಲ್ಲಿ, ೧೯ ಕೆಜಿ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್‌ನ ಹೊಸ ಬೆಲೆ ಈಗ ಎರಡು ಸಾವಿರದ ಏಳುನೂರ ಮೂವತ್ತೆಂಟು ರೂಪಾಯಿಗಳಾಗಲಿದೆ. ಅದೇ ರೀತಿ ಕೋಲ್ಕತ್ತಾದಲ್ಲಿ ಎರಡು ಸಾವಿರದ ಎಂಟುನೂರ ಎಪ್ಪತ್ತೆರಡು ರೂಪಾಯಿ ಐವತ್ತು ಪೈಸೆ ಮುಂಬೈನಲ್ಲಿ ಎರಡು ಸಾವಿರದ ಆರುನೂರ ತೊಂಬತ್ತೊಂದು ರೂಪಾಯಿ ಐವತ್ತು ಪೈಸಾ ಮತ್ತು ಚೆನ್ನೈನಲ್ಲಿ ಎರಡು ಸಾವಿರದ ಒಂಬೈನೂರ ಆರು ರೂಪಾಯಿಗಳಾಗಿರಲಿದೆ. ವಾಣಿಜ್ಯ ಎಲ್‌ಪಿಜಿ ಸಿಲಿಂಡರ್‌ಗಳ ಹೊಸ ಬೆಲೆಗಳು ಇಂದಿನಿಂದ ಜಾರಿಗೆ ಬಂದಿದ್ದು, ಈ ನಿರ್ಧಾರವು ರೆಸ್ಟೋರೆಂಟ್‌ಗಳು, ದಾಬಾಗಳು, ಹೋಟೆಲ್‌ಗಳು ಮತ್ತು ಆಹಾರ ಹಾಗೂ ಪಾನೀಯ ವ್ಯವಹಾರದಲ್ಲಿ ತೊಡಗಿರುವವರಿಗೆ ಕೊಂಚ ಮಟ್ಟಿಗೆ ನಿರಾಳತೆಯನ್ನು ನೀಡುತ್ತದೆ.

<><><><>

ಕಳೆದ ತಿಂಗಳಲ್ಲಿ ಸರಕು ಮತ್ತು ಸೇವಾ ತೆರಿಗೆ-ಜಿಎಸ್‌ಟಿ ಸಂಗ್ರಹವು ೨ ಲಕ್ಷ ೧೧ ಸಾವಿರದ ೨೦೫ ಕೋಟಿ ರೂಪಾಯಿಗಳಿಗೆ ಗಮನಾರ್ಹ ಏರಿಕೆ ಕಂಡಿದೆ. ೨೦೨೫ ರ ಜುಲೈನಲ್ಲಿ ೧ ಲಕ್ಷ ೮೩ ಸಾವಿರದ ೬೫ ಕೋಟಿ ರೂಪಾಯಿಗಳಿದ್ದ ಜಿಎಸ್‌ಟಿ ಸಂಗ್ರಹ ವರ್ಷದಿಂದ ವರ್ಷಕ್ಕೆ ಶೇ ೧೫.೪ ರಷ್ಟು ಹೆಚ್ಚಳವಾಗಿದೆ ಎಂದು ಹಣಕಾಸು ಸಚಿವಾಲಯ ತಿಳಿಸಿದೆ. ಒಟ್ಟು ದೇಶೀಯ ಜಿಎಸ್‌ಟಿ ಆದಾಯ ೧ ಲಕ್ಷ ೪೪ ಸಾವಿರದ ೬೯೫ ಕೋಟಿ ರೂಪಾಯಿಗಳಾಗಿದ್ದು, ಇದು ಒಂದು ವರ್ಷದ ಹಿಂದಿನ ಪ್ರಮಾಣಕ್ಕಿಂತ ಶೇ ೧೦.೧ ರಷ್ಟು ಹೆಚ್ಚಾಗಿದೆ. ಆಮದುಗಳಿಂದಾದ ಜಿಎಸ್‌ಟಿ ಸಂಗ್ರಹವು ಶೇ ೨೮.೮ ರಷ್ಟು ಹೆಚ್ಚಾಗಿ ೬೬ ಸಾವಿರದ ಐನೂರ ೧೧ ಕೋಟಿ ರೂಪಾಯಿಗಳಿಗೆ ತಲುಪಿದ್ದು, ಒಟ್ಟಾರೆ ಮಾಸಿಕ ಸಂಗ್ರಹಕ್ಕೆ ಉತ್ತೇಜನ ನೀಡಿದೆ.

<><><><>

ಗ್ಲಾಸ್ಗೋ ಕಾಮನ್ವೆಲ್ತ್ ಕ್ರೀಡಾಕೂಟ ೨೦೨೬ರಲ್ಲಿ ಪದಕ ಗಳಿಸಿರುವ ಭಾರತದ ಕ್ರೀಡಾಪಟುಗಳನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು, ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರು ಅಭಿನಂದಿಸಿದ್ದಾರೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ, ಕ್ರೀಡಾಕೂಟದಲ್ಲಿ ಪುರುಷರ ಜಾವೆಲಿನ್ ಎಸೆತದಲ್ಲಿ ಬೆಳ್ಳಿ ಪದಕ ಜಯಿಸಿರುವ ನೀರಜ್ ಚೋಪ್ರಾ ಮತ್ತು ಕಂಚಿನ ಪದಕ ಗಳಿಸಿದ ಯಶ್ ವೀರ್ ಸಿಂಗ್ ಅವರನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅಭಿನಂದಿಸಿದ್ದಾರೆ. ಡೆಕಥ್ಲಾನ್‌ನಲ್ಲಿ ಕಂಚಿನ ಪದಕ ತಮ್ಮದಾಗಿಸಿಕೊಂಡ ತೇಜಸ್ವಿನ್ ಶಂಕರ್ ಹಾಗೂ ಮಹಿಳೆಯರ ೫೭ ಕೆಜಿ ಜೂಡೋ ಸ್ಪರ್ಧೆಯಲ್ಲಿ ಬೆಳ್ಳಿ ಪದಕ ಗೆದ್ದ ಜೂಡೋ ಆಟಗಾರ್ತಿ ಯಾಮಿನಿ ಮೌರ್ಯ ಅವರನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅಭಿನಂದಿಸಿದ್ದಾರೆ. ಇದೇ ವೇಳೆ ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರು ಸಹ ಮಾಧ್ಯಮ ಪೋಸ್ಟ್‌ನಲ್ಲಿ ಕ್ರೀಡಾಕೂಟದಲ್ಲಿ ಪದಕ ಗೆದ್ದ ನೀರಜ್ ಚೋಪ್ರಾ, ಯಶ್ ವೀರ್ ಸಿಂಗ್, ತೇಜಸ್ವಿನ್ ಶಂಕರ್ ಮತ್ತು ಯಾಮಿನಿ ಮೌರ್ಯ ಅವರನ್ನು ಅಭಿನಂದಿಸಿದ್ದಾರೆ.

<><><><>

ಮಧ್ಯಪ್ರದೇಶ ಪೊಲೀಸರ ಮಾದಕ ದ್ರವ್ಯ ವಿರೋಧಿ ಅಭಿಯಾನವಾದ ನಶೇ ಸೆ ದೂರಿ ಹೈ ಜರೂರಿ ೨.೦ ಐದು ವಿಶ್ವ ದಾಖಲೆಗಳನ್ನು ನಿರ್ಮಿಸಿದೆ. ಅಭಿಯಾನದಲ್ಲಿ ಲಕ್ಷಾಂತರ ಜನರು ಭಾಗವಹಿಸಿದ್ದರು. ಲಂಡನ್‌ನ ವರ್ಲ್ಡ್ ಬುಕ್ ಆಫ್ ರೆಕಾರ್ಡ್ಸ್ ಅಭಿಯಾನದ ಐದು ಸಾಧನೆಗಳನ್ನು ಗುರುತಿಸಿದೆ. ೧೫ ದಿನಗಳ ಕಾಲ ನಡೆದ ಅಭಿಯಾನ, ಜನರಿಗೆ ಮಾದಕ ದ್ರವ್ಯಗಳಿಂದ ದೂರವಿರುವ ಸಂದೇಶವನ್ನು ಸಾರಿತು. ಚಲನಚಿತ್ರ, ಕ್ರೀಡೆ, ಸಂಗೀತ, ಸಾಹಿತ್ಯ ಮತ್ತು ಆಧ್ಯಾತ್ಮಿಕ ಕ್ಷೇತ್ರಗಳ ೬೦ಕ್ಕೂ ಹೆಚ್ಚು ಗಣ್ಯರು ಸಹ ಅಭಿಯಾನವನ್ನು ಬೆಂಬಲಿಸಿದರು. ರಾಜ್ಯಾದ್ಯಂತ ಜುಲೈ ೧೫ ರಿಂದ ೩೦ ರವರೆಗೆ ನಡೆದ ಅಭಿಯಾನವು ಮಾದಕ ದ್ರವ್ಯ ದುರುಪಯೋಗದ ವಿರುದ್ಧ ಜಾಗೃತಿ ಮೂಡಿಸಿತು ಎಂದು ಮಧ್ಯಪ್ರದೇಶ ಪೊಲೀಸ್ ಪ್ರಧಾನ ಕಚೇರಿ ತಿಳಿಸಿದೆ.

<><><><>

ಕೇರಳಂನಲ್ಲಿ ಭಾರೀ ಮಳೆ ಮುಂದುವರೆದಿದ್ದು, ೧೪ ಜಿಲ್ಲೆಗಳ ಪೈಕಿ ಎಂಟು ಜಿಲ್ಲೆಗಳಲ್ಲಿ ಅತಿ ಹೆಚ್ಚು ಮಳೆಯಾಗುವ ಸಾಧ್ಯತೆ ಇದೆ ಎಂದು ರೆಡ್ ಅಲರ್ಟ್ ಘೋಷಿಸಲಾಗಿದೆ. ಮೂರು ಜಿಲ್ಲೆಗಳಲ್ಲಿ ಆರೆಂಜ್ ಅಲರ್ಟ್ ಜಾರಿಯಲ್ಲಿದ್ದರೆ, ಉಳಿದ ಮೂರು ಜಿಲ್ಲೆಗಳಲ್ಲಿ ಯಲ್ಲೋ ಅಲರ್ಟ್ ಘೋಷಿಸಲಾಗಿದೆ. ಒಂಬತ್ತು ಜಿಲ್ಲೆಗಳಲ್ಲಿ ಶಿಕ್ಷಣ ಸಂಸ್ಥೆಗಳು ಮುಚ್ಚಲ್ಪಟ್ಟಿವೆ. ನಿನ್ನೆ ಸಂಜೆಯಿಂದ ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದಾಗಿ ಹಲವಾರು ಪ್ರದೇಶಗಳಲ್ಲಿ ಭೂಕುಸಿತ ಮತ್ತು ಪ್ರವಾಹ ಉಂಟಾಗಿದೆ. ಕೊಟ್ಟಾಯಂ ಜಿಲ್ಲೆಯಲ್ಲಿ, ಭಾರೀ ಮಳೆಯಿಂದಾಗಿ ಎರಟ್ಟುಪೆಟ್ಟಾ ಮುಳುಗಿದ್ದು, ಪಟ್ಟಣ ಸಂಪರ್ಕ ಕಡಿತಗೊಂಡಿದೆ. ಹತ್ತಿರದ ವಸತಿ ಪ್ರದೇಶಗಳು ಜಲಾವೃತವಾಗಿವೆ. ಜಲಾಶಯದ ಮಟ್ಟ ಏರುತ್ತಲೇ ಇರುವುದರಿಂದ, ಪಾಲಕ್ಕಾಡ್‌ನ ಮಂಗಳಂ ಅಣೆಕಟ್ಟು ಮತ್ತು ತಿರುವನಂತಪುರಂನ ನೆಯ್ಯರ್ ಹಾಗೂ ಅರುವಿಕ್ಕರ ಅಣೆಕಟ್ಟುಗಳ ಗೇಟ್‌ಗಳನ್ನು ತೆರೆಯಲಾಗಿದೆ. ರಾಜ್ಯದ ಕರಾವಳಿಯಲ್ಲಿ ಎರಡು ದಿನಗಳ ಕಾಲ, ಮೀನುಗಾರಿಕೆಯನ್ನು ಸಹ ನಿಷೇಧಿಸಲಾಗಿದೆ.

<><><><>

ಇಂದಿನಿಂದ ಸಿಕ್ಕಿಂನಲ್ಲಿರುವ ನಾಥು ಲಾ ಪಾಸ್ ಮೂಲಕ ಭಾರತ ಮತ್ತು ಚೀನಾ ಗಡಿ ವ್ಯಾಪಾರವನ್ನು ಪುನರಾರಂಭಿಸಲಿದ್ದು, ಇದು ಎರಡು ನೆರೆಯ ರಾಷ್ಟ್ರಗಳ ನಡುವಿನ ಪ್ರಮುಖ ವ್ಯಾಪಾರ ಮಾರ್ಗದ ಪುನರುಜ್ಜೀವನವನ್ನು ಸೂಚಿಸುತ್ತದೆ. ಇದರೊಂದಿಗೆ ಕೋವಿಡ್-೧೯ ಸಾಂಕ್ರಾಮಿಕ ರೋಗದಿಂದಾಗಿ ೨೦೨೦ ರಿಂದ ಆರು ವರ್ಷಗಳವರೆಗೆ ನಿರ್ಬಂಧಿಸಲಾಗಿದ್ದ ಗಡಿ ವ್ಯಾಪಾರ ಪುನರುಜ್ಜೀವಗೊಳ್ಳಲಿದ್ದು ಗಡಿಯಾಚೆಗಿನ ವಾಣಿಜ್ಯ ವ್ಯವಹಾರವನ್ನು ಉತ್ತೇಜಿಸುವ ನಿರೀಕ್ಷೆಯಿದೆ.

<><><><>

ಯುನೈಟೆಡ್ ಕಿಂಗ್‌ಡಮ್ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡ ಆಂಡಿ ಬರ್ನ್‌ಹ್ಯಾಮ್ ಅವರನ್ನು ಪ್ರಧಾನಿ ನರೇಂದ್ರ ಮೋದಿ ಅಭಿನಂದಿಸಿದ್ದಾರೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಪ್ರಧಾನಿ, ತಮ್ಮ ಸಂಭಾಷಣೆಯ ಸಮಯದಲ್ಲಿ ತಂತ್ರಜ್ಞಾನ, ನಾವೀನ್ಯತೆ, ರಕ್ಷಣೆ, ಭದ್ರತೆ, ಶುದ್ಧ ಇಂಧನ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ಒಟ್ಟಾಗಿ ಕೆಲಸ ಮಾಡಲು ಮತ್ತು ಭಾರತ-ಯುಕೆ ಸಮಗ್ರ ಕಾರ್ಯತಂತ್ರದ ಪಾಲುದಾರಿಕೆಯನ್ನು ಹೊಸ ಎತ್ತರಕ್ಕೆ ಕೊಂಡೊಯ್ಯುವ ಕುರಿತು ಮಾತುಕತೆ ನಡೆಸಿದ್ದಾಗಿ ತಿಳಿಸಿದರು.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>